# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Tata Power Renewable Energy Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ, ಗಜೇಂದ್ರಗಡ, ರೋಣ ಮತ್ತು ಯಲಬುರ್ಗಾ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 97.2 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 202.5 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 192 ಎನ್‌ಸಿಇ 2022, ದಿನಾಂಕ: 13.05.2022
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರ ಪತ್ರ ಸಂಖ್ಯೆ: KREDL/ 08/TPREL - 97.2 MW to 202.5 MW/Gadag & Koppal/ F-49 (2022)/613, ದಿನಾಂಕ: 25.07.2022
3. ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 74 ಎನ್‌ಸಿಇ 2022, ದಿನಾಂಕ: 25.11.2022
4. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದನ್ವಯ M/s Tata Power Renewable Energy Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ಗಜೇಂದ್ರಗಡ, ರೋಣ ಮತ್ತು ಯಲಬುರ್ಗಾ ತಾಲ್ಲೂಕುಗಳ ಅಬ್ಬಿಗೇರಿ, ನರೇಗಲ್, ಕರಮುಡಿ ಮತ್ತು ಹಲಕೇರಿ ಗ್ರಾಮಗಳಲ್ಲಿ 97.2 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ISTS ವರ್ಗದಡಿಯಲ್ಲಿ ಕೆಲವೊಂದು ಷರತ್ತುಗಳಿಗೊಳಪಟ್ಟು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಮೇಲಿನ ಆದೇಶದನ್ವಯ M/s Tata Power Renewable Energy Limited ಕಂಪನಿಗೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ, ಗಜೇಂದ್ರಗಡ ರೋಣ ಮತ್ತು ಯಲಬುರ್ಗ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 97.2 ಮ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 202.5 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ M/s Tata Power Renewable Energy Limited ಇವರು ಕೆ.ಆರ್.ಇ.ಡಿ.ಎಲ್. ನಿಯಮಿತವನ್ನು ಕೋರಿರುವುದಾಗಿ, ಸದರಿ ಸಾಮರ್ಥ್ಯ ಹೆಚ್ಚಳಕ್ಕೆ ಸಂಬಂಧಿಸಿದ ಅರ್ಜಿ ಮತ್ತು ಡಿಪಿಆರ್ ಶುಲ್ಕವನ್ನು ನವೀಕರಿಸಬಹುದಾದ ಇಂಧನ ನೀತಿ 2022-27ರಂತೆ ಸಂದಾಯ ಮಾಡಿರುವುದಾಗಿ ಹಾಗೂ ಸದರಿ ಹೆಚ್ಚುವರಿ ಸಾಮರ್ಥ್ಯಕ್ಕೆ ರೈತರೊಂದಿಗೆ Agreement to Sale ದಾಖಲೆಗಳನ್ನು ಕೆ.ಆರ್.ಇ.ಡಿ.ಎಲ್. ಸಲ್ಲಿಸಿರುವುದಾಗಿ ಕೆ.ಆರ್.ಇ.ಡಿ.ಎಲ್.ನಿಯಮಿತವು ತಿಳಿಸಿರುತ್ತದೆ.

M/s Tata Power Renewable Energy Limited ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿಯವರು ಸಾಮರ್ಥ್ಯ ಹೆಚ್ಚಿಸುವಂತೆ ಕೋರಿರುವ ಸ್ಥಳವು M/s Orange Ashok Wind Power Private Limited ಇವರಿಗೆ ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 224 ಎನ್‌ಸಿಇ 2020, ದಿನಾಂಕ:24.11.2020ರನ್ವಯ ಹಂಚಿಕೆ ಮಾಡಿರುವ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಾಗೂ M/s Smart Powertech Private Limited ಇವರಿಗೆ ದಿನಾಂಕ:19.04.2022ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ 200 ಮೆ.ವ್ಯಾ. ಸಾಮರ್ಥ್ಯಕ್ಕೆ ತಾತ್ವಿಕ ಅನುಮೋದನೆ ನೀಡಲು ಶಿಫಾರಸ್ಸುಗೊಂಡಿರುವ ಸ್ಥಳಗಳ ಮೇಲೆ ಬರುತ್ತದೆ. ಆದರೆ M/s Smart Powertech Private Limited ಇವರಿಗೆ ತಾತ್ವಿಕ ಅನುಮೋದನೆಯನ್ನು ನೀಡಿರುವುದಿಲ್ಲ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರದ ಆದೇಶದಲ್ಲಿ ಹಿಂದಿನ ಎಲ್ಲಾ ರಾಜ್ಯಮಟ್ಟದ ಹಂಚಿಕೆ ಸಮಿತಿಗಳಲ್ಲಿ ಹಂಚಿಕೆ/ತಾತ್ವಿಕ ಅನುಮೋದನೆಗೊಂಡು ಹೊರಡಿಸಿರುವ ಎಲ್ಲಾ ಆದೇಶಗಳಲ್ಲಿ ಪವನ ವಿದ್ಯುತ್ ಯೋಜನೆಗಳ ಅನುಷ್ಠಾನಕ್ಕೆ ನಿಗದಿಪಡಿಸಿರುವ ಭೂ ಪ್ರದೇಶವನ್ನು ಪುನರ್ ನಿಗದಿಪಡಿಸಿ (Demarcation) ಆದೇಶಿಸಿದ್ದು, ಅದರಂತೆ ಸರ್ಕಾರದಿಂದ ಹಂಚಿಕೆ/ತಾತ್ವಿಕ ಅನುಮೋದನೆ ಪಡೆದು, ಅನುಷ್ಠಾನಗೊಳ್ಳಬೇಕಾಗಿರುವ ಮತ್ತು ಸರ್ಕಾರದಿಂದ ಈಗಾಗಲೇ ಹಂಚಿಕೆ ಸಮಿತಿಯಲ್ಲಿ ಅನುಮೋದನೆಗೊಂಡು ಆದೇಶಕ್ಕಾಗಿ ಬಾಕಿ ಇರುವ ಯೋಜನೆಗಳ ಸಾಮರ್ಥ್ಯಕ್ಕೆ ಅನ್ವಯಿಸುವಂತೆ, ಪ್ರತಿ WTG ಗೆ 4 ಎಕರೆಯಂತೆ ಭೂಮಿಯನ್ನು ಲೆಕ್ಕೀಕರಿಸಿ, ಅನುಷ್ಠಾನಗೊಳಿಸುವ ಪ್ರದೇಶವನ್ನು ಹೊರತುಪಡಿಸಿ, ಉಳಿದ ಪ್ರದೇಶವನ್ನು ಇತರೆ ಅಭಿವೃದ್ಧಿದಾರರು ಹಂಚಿಕೆ ಕೋರಿದಲ್ಲಿ ಅಂತಹ ಪ್ರಸ್ತಾವನೆಗಳಿಗೆ ಭೂ-ಪ್ರದೇಶವನ್ನು ಪರಿಗಣಿಸಿ ಪುನರ್‌ನಿಗದಿಪಡಿಸಲು (Demarcation) ಅವಕಾಶ ಕಲ್ಪಿಸಲಾಗಿದೆ.

M/s Orange Ashok Wind Power Private Limited ಇವರಿಗೆ ಹಂಚಿಕೆ ಮಾಡಿರುವ 200 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಪ್ರದೇಶವು ಅಂದಾಜು 39,000 ಎಕರೆ ವಿಸ್ತೀರ್ಣ ಹೊಂದಿದ್ದು, ಸದರಿಯವರನ್ನು ಯೋಜನೆಯನ್ನು ಈವರೆವಿಗೂ ಅನುಷ್ಠಾನಗೊಳಿಸಿರುವುದಿಲ್ಲ. ಈ ಕಂಪನಿಗೆ 200 ಮೆ.ವ್ಯಾ. ಸಾಮರ್ಥ್ಯಕ್ಕೆ ಅಳವಡಿಸುವ 100 ಸಂಖ್ಯೆಯ 2 ಮೆ.ವ್ಯಾ. ಸಾಮರ್ಥ್ಯದ ವಿಂಡ್ ಟರ್ಬೈನ್‌ಗಳಿಗೆ ಪ್ರತಿ ವಿಂಡ್ ಟರ್ಬೈನ್‌ಗೆ 4 ಎಕರೆಯಂತೆ ಲೆಕ್ಕೀಕರಿಸಿ ಒಟ್ಟು 400 ಎಕರೆ (100 Nos X 4 Acres = 400 Acres) ಜಮೀನನ್ನು ಮಾತ್ರ ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ M/s Smart Powertech Private Limited ಇವರಿಗೆ ತಾತ್ವಿಕ ಅನುಮೋದನೆ ನೀಡಲು ಶಿಫಾರಸ್ಸುಗೊಂಡಿರುವ 200 ಮೆ.ವ್ಯಾ. ಸಾಮರ್ಥ್ಯಕ್ಕೆ 100 ಸಂಖ್ಯೆಯ 2 ಮೆ.ವ್ಯಾ. ಸಾಮರ್ಥ್ಯದ ವಿಂಡ್ ಟರ್ಬೈನ್‌ಗಳಿಗೆ ಪ್ರತಿ ವಿಂಡ್ ಟರ್ಬೈನ್‌ಗೆ 4 ಎಕರೆಯಂತೆ ಲೆಕ್ಕೀಕರಿಸಿ ಒಟ್ಟು 400 ಎಕರೆ (100 Nos X 4 Acres = 400 Acres) ಜಮೀನನ್ನು ಮಾತ್ರ ಉಪಯೋಗಿಸಿಕೊಳ್ಳಬಹುದಾಗಿದೆ.

M/s Tata Power Renewable Energy Limited ಕಂಪನಿಯು ಯೋಜನೆಗೆ ಸಂಬಂಧಿಸಿದಂತೆ ಟೋಪೋಶೀಟ್ ಸಂಖ್ಯೆ:48 M/14 ರಲ್ಲಿ 39 ಸಂಖ್ಯೆಯ 2.7 ಮೆ.ವ್ಯಾ ಸಾಮರ್ಥ್ಯದ ವಿಂಡ್ ಟರ್ಬೈನ್ ಗಳನ್ನು ಅಳವಡಿಸುವುದಾಗಿ ತಿಳಿಸಿ, ಅಳವಡಿಸುವ ಟರ್ಬೈನ್‌ಗಳ ಅಕ್ಷಾಂಶ ಮತ್ತು ರೇಖಾಂಶಗಳ ಜೊತೆಗೆ ಸಾಮರ್ಥ್ಯ ಹೆಚ್ಚಳಕ್ಕೆ ಕೋರಿರುವ ಪ್ರದೇಶದ ಜಮೀನುಗಳ ರೈತರೊಂದಿಗೆ ಮಾಡಿಕೊಂಡಿರುವ Agreement to Sale (ATS) ದಾಖಲೆಗಳನ್ನು ವಿಸ್ತೃತ ಯೋಜನಾ ವರದಿಯೊಂದಿಗೆ ಸಲ್ಲಿಸಿರುತ್ತಾರೆ. ಸದರಿಯವರು ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ ಲೆಕ್ಕೀಕರಿಸಿ 156 ಎಕರೆ (39 Nos X 4 Acres = 156 Acres) ಖಾಸಗಿ ಜಮೀನನ್ನು ಮಾತ್ರ ಉಪಯೋಗಿಸಿಕೊಂಡು, ಸದರಿಯವರು ನೀಡಿರುವ ಸರ್ವೇ ನಂಬರ್‌ನಲ್ಲಿಯೇ ವಿಂಡ್ ಟರ್ಬೈನ್‌ಗಳನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸಬೇಕಾಗಿರುತ್ತದೆ ಮತ್ತು M/s Orange Ashok Wind Power Private Limited ರವರು 200 ಮೆ.ವ್ಯಾ ಹಾಗೂ M/s Smart Powetech Private limited ರವರ 200 ಮೆ.ವ್ಯಾ ಸಾಮರ್ಥ್ಯಕ್ಕೆ ತೊಂದರೆಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗುತ್ತದೆ.

M/s Tata Power Renewable Energy Limited ಕಂಪನಿಯು ದಿನಾಂಕ:14.07.2011 ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಮುಂಬಯಿಯಲ್ಲಿ ಸ್ಥಾಪಿತಗೊಂಡಿದೆ. ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:31.03.2021 ರ ಅಂತ್ಯಕ್ಕೆ ರೂ.1156.27 ಕೋಟಿ ಎಂದು ಕೆಆರ್ ಇಡಿಎಲ್ ನಿಯಮಿತವು ತಿಳಿಸಿರುತ್ತದೆ.

.....3